**ದಿನಾಂಕಃ 17.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಎನ್.ಜಿ. ವಕೀಲರಿಂದ**

1) ನಾನು ಬಿ.ಎ ಅಂತಿಮ ವರ್ಷ ಓದುತ್ತಿದ್ದೇನೆ. ನಾವು 4 ಜನ ಮಕ್ಕಳು. ನಾನು ಕೊನೆಯ ಮಗ. ದಾವಾ ಸಲ್ಲಿಸುವ ಮೊದಲು ಪ್ರತಿವಾದಿಗಳಿಗೆ ನಮ್ಮ ತಾಯಿ ನೋಟೀಸು ನೀಡಿದ್ದರು ಎಂದರೆ ಸರಿ. ನನಗೆ ದಾವಾ ಮುಂದುವರೆಸಲು ಅಧಿಕಾರ ಪತ್ರ ನೀಡುವವರೆಗೂ ನಾನು ನಮ್ಮ ತಾಯಿಯ ಜೊತೆ ನ್ಯಾಯಾಲಯಕ್ಕೆ ಬರುತ್ತಿದ್ದೆ. ಈಗಲೂ ಸಹ ನಿಮ್ಮ ತಾಯಿ ಆರೋಗ್ಯವಾಗಿದ್ದಾರೆ ಎಂದರೆ ಸಾಕ್ಷಿ ನಮ್ಮ ತಾಯಿಗೆ ಸುಮಾರು 80 ವರ್ಷ ಆಗಿದ್ದು ಅವರು ನಿಂತು ಸಾಕ್ಷ್ಯ ನುಡಿಯಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ವಿರುದ್ಧ ಇದ್ದ ಕ್ರಿಮಿನಲ್ ಪ್ರಕರಣಗಳೆಲ್ಲವೂ ಇತ್ಯರ್ಥವಾಗಿರುತ್ತವೆ. ನನ್ನ ವಿರುದ್ಧ ದರೋಡೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿ.

2) ನಮ್ಮ ತಾಯಿ ಮತ್ತು 1ನೇ ಪ್ರತಿವಾದಿಯ ಮಧ್ಯೆ 2011 ಕ್ಕೂ ಮೊದಲಿನಿಂದ ಆದಂತಹ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿದೆ. ಸರ್ವೆ ನಂ.309 ರಲ್ಲಿ ಒಂಭತ್ತೂವರೆ ಗುಂಟೆಯನ್ನು ನಮ್ಮ ತಾಯಿಗೆ ಮಾರಾಟ ಮಾಡಿದ ಸಂದರ್ಭದಲ್ಲಿ 1ನೇ ಪ್ರತಿವಾದಿಯೂ ಸಹ ಇದ್ದರು. ಸರ್ವೆ ನಂ.309/1 ರಲ್ಲಿ 1ನೇ ಪ್ರತಿವಾದಿಯಿಂದ 8 ಗುಂಟೆಯನ್ನು ನಮ್ಮ ತಾಯಿ ರೂ.50 ಸಾವಿರಕ್ಕೆ ಭೋಗ್ಯಕ್ಕೆ ಪಡೆದಿದ್ದರು ಎಂದರೆ ಸರಿ. **ಈ ಹಂತದಲ್ಲಿ ಸಾಕ್ಷಿಗೆ ಸದರಿ ಬೋಗ್ಯದ ಪತ್ರ ತೋರಿಸಲಾಗಿದ್ದು ಅದನ್ನು ಸಾಕ್ಷಿ ಒಪ್ಪಿಕೊಂಡ ಕಾರಣ ಅದನ್ನು ನಿಡಿ.1 ಎಂದು ಗುರುತಿಸಲಾಯಿತು.** ಸದರಿ ದಾಖಲೆಯ ಅಸಲು ಪ್ರತಿ ನಿಮ್ಮ ಬಳಿ ಇದೆ ಎಂದರೆ ಸರಿಯಲ್ಲ. ಸದರಿ ಸರ್ವೆನಂ. 309/1 ರಲ್ಲಿನ 8 ಗುಂಟೆಯನ್ನು 1ನೇ ಪ್ರತಿವಾದಿ ಬಿಡಿಸಿಕೊಂಡಿದ್ದಾರೆ ಅದು ಅವರ ಸ್ವಾಧೀನದಲ್ಲಿ ಇದೆ. 1ನೇ ಪ್ರತಿವಾದಿಯು ಜೂನ್ 2014 ರಲ್ಲಿ ನಮಗೆ ಹಣ ನೀಡಿ

ನಿಡಿ.1 ಅನ್ನು ಪಡೆದುಕೊಂಡು ನಂತರ ಸದರಿ ಸ್ವತ್ತನ್ನು ಬಿಡಿಸಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ.

3) ನಿಡಿ.1 ಅನ್ನು ವಾಪಸ್ಸು ಪಡೆಯುವ ಸಂದರ್ಭದಲ್ಲಿ ಯಾವುದೇ ಷರಾ ಬರೆದುಕೊಟ್ಟಿಲ್ಲ. ಸಡರಿ ನಿಡಿ.1 ರ ಹಣ ವಾಪಸ್ಸು ಪಡೆಯುವ ಸಂದರ್ಭದಲ್ಲಿ ಮಾದೇಗೌಡರು ಹಾಗೂ 1ನೇ ಪ್ರತಿವಾದಿ ಹಾಜರಿದ್ದರು.

4) ದಾವಾ ಷೆಡ್ಯೂಲ್ ಸ್ವತ್ತು ಒಟ್ಟು 2 ಲಕ್ಷದ 10 ಸಾವಿರಕ್ಕೇ ವ್ಯಾಪಾರ ಆಗಿತ್ತು. ನಿಪಿ.1 ರಲ್ಲಿ ಇರುವ ಒಕ್ಕಣೆಯನ್ನು 1ನೇ ಪ್ರತಿವಾದಿಯೇ ಹೇಳಿ ಬರೆಸಿದ್ದು. ಆ ಸಮಯದಲ್ಲಿ ನಾನೂ ಹಾಜರಿದ್ದೆ, ನಮ್ಮ ತಾಯಿ 2 ಲಕ್ಷ ರೂಗಳನ್ನು ನಗದು ರೂಪದಲ್ಲಿ 1ನೇ ಪ್ರತಿವದಿಗೆ ನೀಡಿದ್ದರು. ಕ್ರಯ ಪತ್ರ ಮಾಡಿಕೊಡಲು 2 ವರ್ಷಗಳ ವಾಯಿದೆ ನಿಗದಿ ಪಡಿಸಲಾಗಿತ್ತು. ದಾವಾ ಷೆಡ್ಯೂಲ್ ಸ್ವತ್ತು ಮೂಲತಃ 1ನೇ ಪ್ರತಿವಾದಿಯ ತಂದೆಗೆ ಸೇರಿದ್ದ ಜಮೀನಾಗಿದ್ದು ಅದರ ಖಾತೆಯನ್ನು ಮಾಡಿಕೊಳ್ಳಲು 2 ವರ್ಷ ಸಮಯ ಕೇಳಿದ್ದರು. ದಾವಾ ಷೆಡ್ಯೂಲ್ ಸ್ವತ್ತಿನ ಖಾತೆ 1ನೇ ಪ್ರತಿವಾದಿಯ ಹೆಸರಿಗೆ ಇದ್ದ ದಾಖಲೆಯನ್ನು ನೋಡಿದ್ದೇನೆ. ಸಾಕ್ಷಿ ಮುಂದುವರೆದು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ನಮ್ಮ ಅಣ್ಣತಮ್ಮಂದಿರಿಗೂ ಸಹಾ ಭಾಗ ಇದ್ದೆ, ಅವರಿಂದ ಸಹಿ ಮಾಡಿಸಿ ಕೊಡುವುದಾಗಿ ಹೇಳಿದ್ದರು. ಸದರಿ ವಿಚಾರವನ್ನು ನಿಪಿ.1 ರಲ್ಲಿ ನಮೂದಿಸಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಪ್ರಕರಣವನ್ನು ಮುಂದೂಡಲಾಯಿತು.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**